ಮುಖ್ಯ ಕಾರ್ಯದರ್ಶಿಯವರು ಚಿಂತನೆ ಮಾಡತಕ್ಕಂಥ ಹಂತದಲ್ಲಿದ್ದೇವೆ. ಮಾನ್ಯ ಸದಸ್ಯರ ಮತ್ತು ಸದನದ ಗಮನಕ್ಕೆ ಹೇಳುವುದೇನೆಂದರೆ, ನಿಮ್ಮ ಕಳಕಳಿಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಇದರ ಬಗ್ಗೆ ಈಗಾಗಲೇ ನಮ್ಮ ಯೋಜನೆಯನ್ನು ನಾವು ನಿಯೋಜಿಸಿದ್ದೇವೆ.

ಕೇಂದ್ರ ಸರ್ಕಾರದ ಅನ್ನಪೂರ್ಣ ಯೋಜನೆ ಕುರಿತು.

184(2380)

ಶ್ರೀ ರಾಮದಾಸ್ ಎ.(ಕೃಷ್ಣರಾಜ): ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ವರ್ಗದವರನ್ನು ಗುರುತಿಸುವ ಕೆಲಸ ಯಾವ ಹಂತದಲ್ಲಿದೆ; ಎಷ್ಟು ಜನ ಈ ಪಟ್ಟಿಯಲ್ಲಿದ್ದಾರೆ; ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಇದೆ;

ಆ) ಕೇಂದ್ರ ಸರ್ಕಾರದ ಅನ್ನಪೂರ್ಣ ಯೋಜನೆ ರಾಜ್ಯದಲ್ಲಿ ಜಾರಿಗೆ ಬಂದಿದೆಯೇ? ಎಂದಿನಿಂದ ಜಾರಿಗೆ ಬಂದಿದೆ; ಎಷ್ಟು ಜನ ಫಲಾನುಭವಿಗಳು ಸದರಿ ಯೋಜನೆಯಡಿ ಲಾಭ ಪಡೆಯುತ್ತಿದ್ದಾರೆ; (ವಿವರ ನೀಡುವುದು)

ಇ) ಪ್ರಧಾನ ಮಂತ್ರಿಗಳ ಅಂತ್ಯೋದಯ ಅನ್ನ ಯೋಜನೆ ರಾಜ್ಯದಲ್ಲಿ ಜಾರಿಗೆ ಬಂದಿದೆಯೇ; ಎಂದಿನಿಂದ ಜಾರಿಗೆ ಬಂತು. ಈ ಯೋಜನೆಯಡಿಯಲ್ಲಿ ಎಷ್ಟು ಜನ ಲಾಭ ಪಡೆಯುತ್ತಿದ್ದಾರೆ. (ವಿವರ ನೀಡುವುದು)

ಈ) ಈ ಬಗ್ಗೆ ರಾಜ್ಯ ಸರ್ಕಾರದ ಯಾವುದಾದರೂ ಹೊಸ ಯೋಜನೆ ಜಾರಿಯಲ್ಲಿದೆಯೆ?

ಶ್ರೀ ಡಿ.ಬಿ.ಇನಾಂದಾರ್ (ಆಹಾರ ಮತ್ತು ನಾಗರಿಕ ಸರಬರಾಜು ರಾಜ್ಯ ಸಚಿವರು):

ಅ) ರಾಜ್ಯದ 27 ಜಿಲ್ಲೆಗಳ ಪೈಕಿ, ಗುಲ್ಬರ್ಗ, ಚಿಕ್ಕಮಗಳೂರು, ತುಮಕೂರು ಮತ್ತು ರಾಯಚೂರು ಜಿಲ್ಲೆಗಳನ್ನು ಹೊರತುಪಡಿಸಿ, ಉಳಿದ ಜಿಲ್ಲೆಗಳಲ್ಲಿ ಪೂರ್ಣವಾಗಿ ಹಾಗೂ ಬೀದರ್ ಜಿಲ್ಲೆಯಲ್ಲಿ ಭಾಗಶಃವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳನ್ನು ಆಯಾ ಗ್ರಾಮಸಭೆಯ ಮೂಲಕ ಗುರುತಿಸುವ

ಕಾರ್ಯ ಪೂರ್ಣಗೊಂಡಿದ ಲಭ್ಯವಿರುವ ಜಿಲ್ಲಾವಾರು ಮಾಹಿತಿಯು ಕೆಳಕಂಡಂತಿದೆ:

ಕ್ರ. ಸಂ.	ಜಿಲ್ಲೆಯ ಹೆಸರು	ಗ್ರಾಮ ಸಭೆಗಳಲ್ಲಿ ಗುರುತಿಸಲ್ಪಟ್ಟ ಅರ್ಹ ಫಲಾನುಭವಿಗಳ ಸಂಖ್ಯೆ
1.	ಬೆಂಗಳೂರು (ಉ.ವ)	-
2.	ಬೆಂಗಳೂರು(ನಗರ)	17223
3.	ಬೆಂಗಳೂರು (ಗ್ರಾಮಾಂತರ)	99621
4.	ಬಾಗಲಕೋಟೆ	25702
5.	ಬೆಳಗಾಂ	91461
6.	ಬಳ್ಳಾರಿ	103858
7.	ಬೀದರ್	70662
8.	ಬಿಜಾಪುರ	94910
9.	ಚಾಮರಾಜನಗರ	51860
10.	ಚಿಕ್ಕಮಗಳೂರು	-
11.	ಚಿತ್ರದುರ್ಗ	92727
12.	ದಕ್ಷಿಣ ಕನ್ನಡ	43836
13.	ದಾವಣಗೆರೆ	73298
14.	ಧಾರವಾಡ	57085
15.	ಗದಗ್	48350
16.	ಗುಲ್ಬರ್ಗಾ	-

17.	ಹಾಸನ	61225
18.	ಹಾವೇರಿ	61810
19.	ಕೊಡಗು	13189
20.	ಕೋಲಾರ	131471
21.	ಕೊಪ್ಪಳ	88756
22.	ಮಂಡ್ಯ	80755
23.	ಮೈಸೂರು	83406
24.	ರಾಯಚೂರು	-
25.	ಶಿವಮೊಗ್ಗ	49445
26.	ತುಮಕೂರು	-
27.	ಉತ್ತರ ಕನ್ನಡ	52744
28.	ಉಡುಪಿ	30431
	ಒಟ್ಟು	1517825

ಆ) ಇಲ್ಲ ರಾಜ್ಯದಲ್ಲಿ ಅನ್ನಪೂರ್ಣ ಯೋಜನೆಯನ್ನು ಜಾರಿಗೊಳಿಸಲಾಗಿಲ್ಲ.

ಇ) ರಾಜ್ಯದಲ್ಲಿ ಅಂತ್ಯೋದಯ ಅನ್ನ ಯೋಜನೆಯನ್ನು ದಿನಾಂಕ 3.7.2001 ರಂದು ಉದ್ಘಾಟಿಸಲಾಗಿದೆ. ಆಹಾರಧಾನ್ಯಗಳನ್ನು ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಬಿಡುಗಡೆ ಆದೇಶ ನಿರೀಕ್ಷೆಯಲ್ಲಿದೆ.

ಈ) ಕೇಂದ್ರ ಸರ್ಕಾರದಿಂದ ರಾಜ್ಯದಲ್ಲಿ 479700 ಕುಟುಂಬಗಳಿಗೆ ಈ ಯೋಜನೆಯ ವ್ಯಾಪ್ತಿಯನ್ನು ನಿಗಧಿಪಡಿಸಿದ್ದು, ಈ ಸಂಖ್ಯೆಯ ಕುಟುಂಬಗಳಿಗೆ ಈ ಯೋಜನೆಯ ಪ್ರಯೋಜನ ದೊರೆಯುವುದು. ಈ ಯೋಜನೆಯ ಮಾದರಿಯಲ್ಲಿಯೇ ರಾಜ್ಯದಲ್ಲಿ ನೈಜ ಬಡತನ ರೇಖೆಗಿಂತ ಕೆಳಗಿನ ಎಲ್ಲಾ ಕುಟುಂಬಗಳನ್ನು ಗ್ರಾಮಸಭೆಗಳಲ್ಲಿ ಗುರುತಿಸಿ ಅರ್ಹ ಕುಟುಂಬಗಳಿಗೆ ಹಳದಿ ಪಡಿತರ ಚೀಟಿಯನ್ನು ನೀಡಿ, ಈ ಕುಟುಂಬಗಳಿಗೆಲ್ಲಾ ಪ್ರತಿ ಮಾಹೆ ಈ ಕೆಳಕಂಡ ಪ್ರಮಾಣದಲ್ಲಿ

ಕಡಿಮೆ ದರದಲ್ಲಿ ಆಹಾರಧಾನ್ಯಗಳನ್ನು ವಿತರಿಸಲು ಉದ್ದೇಶಿಸಿದೆ:

ಅಕ್ಕಿ		ಗೋಧಿ	
ಪ್ರಮಾಣ	ದರ	ಪ್ರಮಾಣ	ದರ
8 ಕೆಜಿ	ರೂ.3.50	2 ಕೆಜಿ	ರೂ.2.75
ಹೆಚ್ಚುವರಿ			
8 ಕೆಜಿ	ರೂ.6.15	2 ಕೆಜಿ	ರೂ.4.65

ಬಳ್ಳಾರಿ ಜಿಲ್ಲೆಯಲ್ಲಿ ಈ ಯೋಜನೆಯನ್ನು 1.3.2001ರಿಂದ ಜಾರಿಗೊಳಿಸಿದೆ. 1.7.2001ರಿಂದ ಈ ಕೆಳಕಂಡ 8 ಜಿಲ್ಲೆಗಳಲ್ಲಿ ಸಹ ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ:

(1) ಚಿತ್ರದುರ್ಗ

(2) ಕೊಪ್ಪಳ

(3) ಮೈಸೂರು

(4) ಹಾವೇರಿ

(5) ಗದಗ್

(6) ಕೊಡಗು

(7) ಉಡುಪಿ

(8) ದಾವಣಗೆರೆ

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ರಾಜ್ಯದಲ್ಲಿ 15,17,825 ಬಡತನ ರೇಖೆಗಿಂತ ಕೆಳಗಿರುವ ವರ್ಗದವರನ್ನು ಗುರುತಿಸಲಾಗಿದೆ ಎಂದು ತಿಳಿಸಿದ್ದಾರೆ. ನನ್ನ ಪ್ರಶ್ನೆ ಏಕೆ ರಾಜ್ಯದಲ್ಲಿ ಅನ್ನಪೂರ್ಣ ಯೋಜನೆಯನ್ನು ಜಾರಿಗೆ ತಂದಿರುವುದಿಲ್ಲ. ಅದರ ಜೊತೆಯಲ್ಲಿ ಅನ್ನಪೂರ್ಣ ಯೋಜನೆಯ ಮುಖ್ಯಾಂಶಗಳು ಏನು ಎನ್ನುವುದು. ಪ್ರಧಾನ ಮಂತ್ರಿಗಳ ಅಂತ್ಯೋದಯ ಅನ್ನ ಯೋಜನೆಯನ್ನು ಈಗ ತಾವು ಜಾರಿಗೆ ಕೊಟ್ಟಿರುತ್ತೀರಿ. ಅದು ಡಿಸೆಂಬರ್ 25ರಂದು ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ಹುಟ್ಟು ಹಬ್ಬದ ದಿನ ಉದ್ಘಾಟನೆಯಾಯಿತು. ಕೇಂದ್ರ

ಸರ್ಕಾರದ ಒಂದು ಆದೇಶದ ಪ್ರಕಾರದಲ್ಲಿ ಬಳು ರಂಗಳಿಂದ ಅಂತ್ಯೋದಯದ ಒಂದು ಕಾರ್ಡ್‌ನ್ನು ಪ್ರಿಂಟ್ ಮಾಡಿ ಫಲಾನುಭವಿಗಳಿಗೆ ಕೊಡುವುದಕ್ಕೆ ಏಕೆ ಆಗಲಿಲ್ಲ ಎನ್ನುವುದು? ಇನ್ನೊಂದು ಪ್ರಮುಖವಾದ ಅಂಶವೆಂದರೆ, ಒಂದು ಕುಟುಂಬಕ್ಕೆ ಕನಿಷ್ಟ 25 ಕೆಜಿ ಆಹಾರಧಾನ್ಯವನ್ನು ತಲುಪಿಸುವುದರಲ್ಲಿ ಒಂದು ಕೆಜಿ ಅಕ್ಕಿಗೆ ಮೂರು ರೂಪಾಯಿ ಒಂದು ಕೆಜಿ ಗೋಧಿಗೆ ಎರಡು ರೂಪಾಯಿಗೆ ಕೊಡಬೇಕೆನ್ನುವ ಒಂದು ಏಚಾರವನ್ನು ಇವತ್ತು ಆದೇಶದ ಮೂಲಕವಾಗಿ ಕೊಟ್ಟಿದೆ. ಆದರೆ ನಾವು ಒಂದು ಕೆಜಿ ಅಕ್ಕಿಗೆ ಮೊದಲು 8 ಕೆಜಿಗೆ 3-50 ಪೈಸೆ, ಮೊದಲ 7 ಕೆಜಿ ಗೋಧಿಗೆ 2-75 ಪೈಸೆ, ಅದು ಅಲ್ಲದೆ ಎರಡನೆ ಹೆಚ್ಚುವರಿ 8 ಕೆಜಿ ಅಕ್ಕಿಗೆ 6-15 ಪೈಸೆ, ಮತ್ತು ಎರಡು ಕೆಜಿ 4-15 ಪೈಸೆ, ಈ ರೀತಿಯಾಗಿ ರೇಟ್‌ನಲ್ಲಿ ವ್ಯತ್ಯಾಸವನ್ನು ಮಾಡಿ ಬಡವರಿಗೆ ಮುಟ್ಟಿಸುವ ಆಹಾರಧಾನ್ಯದಲ್ಲಿ ಏಕೆ ರೇಟ್‌ನಲ್ಲಿ ವ್ಯತ್ಯಾಸವನ್ನು ರಾಜ್ಯ ಸರ್ಕಾರ ಮಾಡಿದೆ ಎನ್ನುವ ಅಂಶವನ್ನು ಕೇಳಲು ನಾನು ಇಚ್ಛಿಪಡುತ್ತೇನೆ.

ಶ್ರೀ ಡಿ.ಜಿ.ಜ್ಞಾನಾಂದಾರ್: ಮೊದಲನೆ ಪ್ರಶ್ನೆಯನ್ನು ಇವರು ಅನ್ನಪೂರ್ಣ ಯೋಜನೆಯ ಬಗ್ಗೆ ಕೇಳಿದರು. ಇದು ವೃದ್ಧಾಪ್ಯ ವೇತನದ ಬದಲಿಗೆ, ಹೊಸ ಫಲಾನುಭವಿಗಳನ್ನು ಆಯ್ಕೆ ಮಾಡುವಂಥ ಸಂದರ್ಭದಲ್ಲಿ 10 ಕೆಜಿ ಆಹಾರಧಾನ್ಯವನ್ನು ಪುಕ್ಕಟೆಯಾಗಿ ಕೊಡುವಂಥ ಒಂದು ಯೋಜನೆ. ನಮ್ಮಲ್ಲಿ 4,79,700 ಜನಕ್ಕೆ ಪ್ರತಿಯೊಬ್ಬರಿಗೆ ನಾವು 125-00 ರೂಪಾಯಿಗಳನ್ನು ಕೊಡುತ್ತಿದ್ದೇವೆ. ಹೊಸದಾಗಿ ಯಾರಾದರೂ ಅರ್ಜಿಯನ್ನು ಕೊಟ್ಟರೆ, ಅದರಲ್ಲಿ ನಾವು ಆಯ್ಕೆ ಮಾಡಿಕೊಳ್ಳಲು ಅವಕಾಶವನ್ನು ಕೊಟ್ಟರೆ ಬರೀ 10 ಕೆಜಿ ಆಹಾರಧಾನ್ಯವನ್ನು ತಗೆದುಕೊಳ್ಳುತ್ತೀರೋ ಅಥವಾ ಹಣವನ್ನು ತಗೆದುಕೊಳ್ಳುತ್ತೀರೋ ಎನ್ನುವ ಬಗ್ಗೆ ರಾಜ್ಯ ಸರ್ಕಾರದಿಂದ ನಾವು ಕೇಂದ್ರ ಸರ್ಕಾರಕ್ಕೆ ಒಂದು ಕೌಂಟರ್ ಆಫರ್‌ನ್ನು ಮಾಡಿರುತ್ತೇವೆ. ಬಿಪಿಎಲ್ ಫಲಾನುಭವಿಗೆ 10 ಕೆಜಿ ಆಹಾರಧಾನ್ಯವನ್ನು ಕೊಡಬೇಕು, ಮತ್ತು 50 ರೂಪಾಯಿಗಳನ್ನು ಕೊಟ್ಟರೆ, ಇದು ಒಂದು ಉತ್ತಮವಾದ ಯೋಜನೆ ಆಗಿದೆ. ಕೇಂದ್ರ ಸರ್ಕಾರದಿಂದ 3 ಲಕ್ಷ 50 ಸಾವಿರ ಜನರಿಗೆ ವೃದ್ಧಾಪ್ಯ ವೇತನವನ್ನು ಕೊಡುತ್ತಿದ್ದಾರೆ. ಇನ್ನುಳಿದ ಜನರಿಗೆ ರಾಜ್ಯ ಸರ್ಕಾರ ಅನುದಾನವನ್ನು ಕೊಡುತ್ತಿದೆ. ನಮ್ಮಲ್ಲಿರತಕ್ಕಂಥ ಎಲ್ಲಾ ವೃದ್ಧಾಪ್ಯ ವೇತನ ಪಡೆಯತಕ್ಕಂಥ ಜನರನ್ನು ಗುರ್ತಿಸಿ, ಈ ಯೋಜನೆಯಲ್ಲಿ ಕೊಡತಕ್ಕಂಥ ಆಹಾರಧಾನ್ಯ ಏನಿದೆ, ಅದಕ್ಕಿಂತ ಜಾಸ್ತಿ ನಾವು ಕೊಡುತ್ತಿದ್ದೇವೆ. ಆ ದೃಷ್ಟಿಯಿಂದ ಇವತ್ತು ನಮ್ಮಲ್ಲಿ ಇನ್ವಿಮೆಂಟ್ ಮಾಡುವುದಕ್ಕಾಗಲ್ಲ ಅಷ್ಟೆ ಹೊರತು ಬೇರೆ ಯಾವ ಕಾರಣದಿಂದಲೂ ಅಲ್ಲ. ನೀವು ಇವತ್ತು ಅಂತ್ಯೋದಯ ಅನ್ನ ಯೋಜನೆಯ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೀರಿ. ನಮ್ಮ ರಾಜ್ಯದಲ್ಲಿ ಕೇವಲ 4,79,700 ಜನರಿಗೆ ಮಾತ್ರ ಈ ಯೋಜನೆ ಜಾರಿಗೆ ಬರುತ್ತಿದೆ ಇಷ್ಟು ಜನರನ್ನು ಯಾವ ರೀತಿಯಾಗಿ ಐಡೆಂಟಿಫೈ ಮಾಡಬೇಕು. ಗ್ರಾಮಸಭೆಯ ಮುಖಾಂತರ

ಗುರ್ತಿಸತಕ್ಕಂಥದ್ದು, ಅವರಿಗೆ ನಾವು ಒಂದು ಆದೇಶವನ್ನು ಕೊಟ್ಟು ಫಲಾನುಭವಿಗಳ ಲಿಸ್ಟ್‌ನ್ನು ಕಳುಹಿಸಿ ಕೊಡುವಂತೆ ನಾವು ಪ್ರತಿಯೊಂದು ಜಿಲ್ಲೆಗೆ ಪತ್ರವನ್ನು ಬರೆದಿದ್ದೇವೆ. ಇಲ್ಲಿಯವರೆಗೆ ನಮಗೆ 24 ಜಿಲ್ಲೆಗಳಿಂದ ಲಿಸ್ಟ್ ಬಂದಿದೆ. ಇನ್ನು ಗುಲ್ಬರ್ಗಾ, ತುಮಕೂರು, ಚಿಕ್ಕಮಂಗಳೂರು ಈ ಮೂರು ಜಿಲ್ಲೆಗಳಿಂದ ಲಿಸ್ಟ್ ಬಂದಿರುವುದಿಲ್ಲ. ಅದು ಬಂದ ನಂತರ ಈ ಯೋಜನೆಯನ್ನು ಜಾರಿಗೆ ತರುತ್ತೇವೆ. 25ನೇ ಡಿಸೆಂಬರ್ ತಿಂಗಳಲ್ಲಿ ಇದನ್ನು ಅನೌನ್ಸ್ ಮಾಡಿದರು. ಇದನ್ನು ಕಾರ್ಯರೂಪಕ್ಕೆ ತರುವಂಥ ಸಂದರ್ಭದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕಂಥ ಗ್ರಾಮಸಭೆಗಳಿಂದ ಲಿಸ್ಟ್ ಬಂದಿದೆ. ಈ 4,79,700 ಜನ ಏನಿದ್ದಾರೆ ಅವರಿಗೆ ನಾವು 3 ರೂಪಾಯಿ ಅಕ್ಕಿ ಹಾಗೂ ಎರಡು ರೂಪಾಯಿ ಕೆಜಿ ಅಕ್ಕಿಯನ್ನು ಕೊಡುತ್ತಿದ್ದೇವೆ. ಕೇಂದ್ರ ಸರ್ಕಾರ ಬಡತನ ರೇಖೆಗಿಂತ ಕೆಳಗಿರತಕ್ಕಂಥ ಜನರಿಗೆ ಆಹಾರಧಾನ್ಯ ಕೊಡತಕ್ಕಂಥದ್ದರಲ್ಲಿ ಬೆಲೆಗಳನ್ನು ಹೆಚ್ಚು ಮಾಡಿರುವ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು ಬಡತನ ರೇಖೆಗಿಂತ ಕೆಳಗಿರುವ ಜನರ ಒಂದು ಲಿಸ್ಟ್‌ನ್ನು ಐಡೆಂಟಿಫೈ ಮಾಡಿದ್ದು, ಇದರಲ್ಲಿ ಈಗಾಗಲೇ 17,825 ಜನರ ಒಂದು ಲಿಸ್ಟ್ ನಮಗೆ ಬಂದಿದೆ. ಈ ಜನರಿಗೆ ರೂ.6-15 ಪೈಸೆಗೆ ಒಂದು ಕೆಜಿ ಅಕ್ಕಿಯ ಬದಲಾಗಿ 10 ಕೆಜಿ ಅಕ್ಕಿಯನ್ನು ರೂ.3-15 ಪೈಸೆಗಳಂತೆ ನಾವು ಕೊಡಬೇಕು. ರಾಜ್ಯಸರ್ಕಾರದಿಂದ ಬಡತನ ರೇಖೆಗಿಂತ ಕೆಳಗೆ ಇರತಕ್ಕಂಥ ಜನರಿಗೆ ಕಮ್ಮಿ ದರದಲ್ಲಿ ಆಹಾರಧಾನ್ಯವನ್ನು ಒದಗಿಸತಕ್ಕಂಥದ್ದನ್ನು ಮಾಡಿದೆ. ಇದು ಕೇಂದ್ರ ಸರ್ಕಾರದ ಯೋಜನೆ ಅಲ್ಲ ಎನ್ನುವ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಲು ನಾನು ಬಯಸುತ್ತೇನೆ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರ ಮಾಡಿರುವುದನ್ನು ನಾನು ವೆಲ್‌ಕಂ ಮಾಡುತ್ತೇನೆ. ಅಂತ್ಯೋದಯ ಅನ್ನಪೂರ್ಣ ಯೋಜನೆಯ ಅಡಿಯಲ್ಲಿ ತಮಗೆ ಕೇಂದ್ರ ಸರ್ಕಾರದಿಂದ ಒಂದು ಕುಟುಂಬಕ್ಕೆ 25 ಕೆಜಿ ಆಹಾರಧಾನ್ಯವನ್ನು ಕೊಡುವಂಥ ಒಂದು ಯೋಜನೆಗೆ ಇದು ತಮಗೆ ಒಂದು ಪ್ರತ್ಯೇಕವಾದ ಯೋಜನೆ. ಒಂದು ಕೆಜಿ ಅಕ್ಕಿಗೆ 3 ರೂಪಾಯಿ, ಒಂದು ಕೆಜಿ ಗೋಧಿಗೆ ಎರಡು ರೂಪಾಯಿಗಳು, ಈ ದರದಲ್ಲಿ ಆಹಾರವನ್ನು ವಿತರಣೆ ಮಾಡಬೇಕೆನ್ನುವ ಆದೇಶ ಇದ್ದರು ಕೂಡ, ನೀವು ಕನ್‌ವರ್ಟ್ ಮಾಡಿರುವ ಬಗ್ಗೆ ನಾನು ಕೇಳುತ್ತಿಲ್ಲ.

ಶ್ರೀ ಡಿ.ಬಿ.ಇನಾಂದಾರ್: ರಾಜ್ಯ ಸರ್ಕಾರ ಯಾವುದಾದರೂ ಯೋಜನೆಯನ್ನು ಜಾರಿಗೆ ತಂದಿದ್ದಾರೆಯೇ ಎನ್ನುವ ಬಗ್ಗೆ ನೀವು ಪ್ರಶ್ನೆಯನ್ನು ಕೇಳಿರುತ್ತೀರಿ. ಅಂತ್ಯೋದಯ ಹಾಗೂ ಅನ್ನಪೂರ್ಣ ಯೋಜನೆಯ ಬಗ್ಗೆ ತಾವು ಪ್ರಶ್ನೆ ಕೇಳಿರುವುದಿಲ್ಲ. ಅಂತ್ಯೋದಯ ಅನ್ನಪೂರ್ಣ ಯೋಜನೆಯಲ್ಲಿ 4,79,700 ಕುಟುಂಬಗಳಿಗೆ ಪ್ರತಿ ಕುಟುಂಬಕ್ಕೆ 25 ಕೆಜಿ ಆಹಾರಧಾನ್ಯವನ್ನು ಅಕ್ಕಿ ಒಂದು ಕೆಜಿಗೆ 3

ರೂಪಾಯಿ ಹಾಗೂ ಗೋಧಿಗೆ 2 ರೂಪಾಯಿಯಂತೆ ಮಾತ್ರ ಈ ಜನರಿಗೆ ಕೊಡುತ್ತಿದ್ದೇವೆ. ರಾಜ್ಯ ಸರ್ಕಾರದಿಂದ ಒಂದು ಕೌಂಟರ್ ಪ್ರಪೋಸಲ್‌ನ್ನು ಮೊನ್ನೆ ಕೇಂದ್ರ ಆಹಾರ ಸಚಿವರು ಬಂದಿದ್ದಾಗ, ಬಡತನ ರೇಖೆಗಿಂತ ಎಷ್ಟು ಜನ ಕೆಳಗಡೆ ಇದ್ದಾರೆ ಅವರಿಗೆ ಈ ಯೋಜನೆಯ ಒಂದು ಪ್ರಪೋಜಲ್‌ನ್ನು ನಾವು ಕೊಟ್ಟರುತ್ತೇವೆ. ಇದರಲ್ಲಿ 15 ಪರ್ಸೆಂಟ್ ಜನರನ್ನು ಮಾತ್ರ ಆಯ್ಕೆ ಮಾಡಿಕೊಡುವ ಒಂದು ಯೋಜನೆ ಇದಾಗಿದೆ. ಅನ್ನಪೂರ್ಣ ಯೋಜನೆಯಲ್ಲಿ 10 ಕೆಜಿ ಆಹಾರಧಾನ್ಯವನ್ನು ಮಾತ್ರ ಕೊಡುವುದು ಅದಕ್ಕಿಂತ ಹೆಚ್ಚಿಗೆ ಕೊಡುವುದು ಆದರಲ್ಲಿ ಇರುವುದಿಲ್ಲ. ಇದು ವೃದ್ಧಾಪ್ಯರಿಗೆ ಮಾತ್ರ. ತಾವು ಕೇಳಿರುವ ಮೇಲ್ಕಂಡ ಪ್ರಶ್ನೆಗೆ ಇದು ಉತ್ತರವಾಗಿದೆ. ಕೇಂದ್ರ ಸರ್ಕಾರ ಬೆಲೆಯನ್ನು ಪರಿಸಿದ ನಂತರ ಬಡತನ ರೇಖೆಗಿಂತ ಕೆಳಗಡೆ ಇರುವಂಥ ಜನರಿಗೆ ತೊಂದರೆಯಾಗುತ್ತದೆ ಎನ್ನುವ ಒಂದು ದೃಷ್ಟಿಯಿಂದ ಈ ಯೋಜನೆಯನ್ನು ಮಾಡಿಕೊಂಡು 10 ಕೆಜಿ ಆಹಾರಧಾನ್ಯವನ್ನು ಕಡಿಮೆ ದರದಲ್ಲಿ ಕೊಡಬೇಕು ಹಾಗೂ 10 ಕೆಜಿ ಆಹಾರಧಾನ್ಯವನ್ನು ಕೇಂದ್ರ ಸರ್ಕಾರ ನಿಗದಿ ಮಾಡಿರುವ ಬೆಲೆಯಲ್ಲಿ ಕೊಡಬೇಕು ಎನ್ನುವ ದೃಷ್ಟಿಯಿಂದ ರಾಜ್ಯ ಸರ್ಕಾರದಿಂದ ಬಿಪಿಎಲ್ ಕಾರ್ಡ್‌ನ್ನು ನಾವು ಮಾಡಿದ್ದೇವೆ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, ತಮ್ಮ ಸರ್ಕಾರದ ಒಂದು ಸ್ಪಷ್ಟವಾದ ಸುತ್ತೋಲೆ ಇದೆ, 6-1-2001ನೇ ಸಾಲಿನಲ್ಲಿ ತಾವೇ ಹೊರಡಿಸಿರುವ ಸುತ್ತೋಲೆಯಲ್ಲಿ ಇದೆ. ಅಂತ್ಯೋದಯ ಯೋಜನೆಯಲ್ಲಿ ಪ್ರತಿ ಒಂದು ತಿಂಗಳಿಗೆ, ಪ್ರತಿ ಒಂದು ಕುಟುಂಬಕ್ಕೆ 25 ಕೆಜಿ ಆಹಾರಧಾನ್ಯಗಳನ್ನು ಒದಗಿಸುವುದು, ರಾಜ್ಯ ಸರ್ಕಾರದಿಂದ ಪ್ರತಿ ಒಂದು ಕೆಜಿ ಅಕ್ಕಿಗೆ 3-00 ರೂಪಾಯಿ ಹಾಗೂ ಪ್ರತಿ ಒಂದು ಕೆಜಿ ಗೋಧಿಗೆ 2-00 ರೂಪಾಯಿಗಳಂತೆ ಆಹಾರಧಾನ್ಯವನ್ನು ವಿತರಣೆ ಮಾಡಬೇಕೆಂದು ಈ ಯೋಜನೆಗೆ ಕೇಂದ್ರಸರ್ಕಾರ ನೀಡಿದೆ ಎಂದು ತಾವು ಹೇಳಿರುತ್ತೀರಿ. 4.79 ಜನ ಅಂತ್ಯೋದಯ ಯೋಜನೆಯಡಿಯಲ್ಲಿ ಬರತಕ್ಕಂತಹವರಿಗೆ ಈ ಬೆಲೆಯಲ್ಲಿ ಆಹಾರಧಾನ್ಯವನ್ನು ಕೊಡುತ್ತಿರುವುದರಿಂದ 13.96 ಕೋಟಿ ರೂಪಾಯಿಗಳು ರಾಜ್ಯ ಸರ್ಕಾರಕ್ಕೆ ಉಳಿತಾಯವಾಗುತ್ತದೆ ಎನ್ನುವ ಮಾತನ್ನು ಕೂಡ ತಾವು ಹೇಳಿರುತ್ತೀರಿ. ಈ ಯೋಜನೆಯಲ್ಲಿ 13.96 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ಉಳಿಸಿಕೊಳ್ಳುವ ಯೋಜನೆ ಇದು ಅಲ್ಲ. ಒಂದು ಕುಟುಂಬಕ್ಕೆ 25 ಕೆಜಿ ಆಹಾರಧಾನ್ಯವನ್ನು ಪ್ರತಿ ತಿಂಗಳು ಕೊಡುವುದಕ್ಕೆ ಪ್ರತ್ಯೇಕವಾದ ಒಂದು ಕಾರ್ಡ್‌ನ್ನು ಮಾಡಿ ಆ ಫಲಾನುಭವಿಗಳಿಗೆ ಈ ಯೋಜನೆಯನ್ನು ಜಾರಿಗೆ ತರಲು ತಾವು ಏನು ಕ್ರಮವನ್ನು ಕೈಗೊಂಡಿರುತ್ತೀರಿ ಎನ್ನುವುದರ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿರುತ್ತೇನೆ.

ಶ್ರೀ ಡಿ.ಬಿ.ಇನಾಂದಾರ್: ಮಾನ್ಯ ಅಧ್ಯಕ್ಷರೆ, ಅಂತ್ಯೋದಯ ಅನ್ನ ಯೋಜನ

ಬೇರೆ, ರಾಜ್ಯಸರ್ಕಾರದ ಯೋಜನೆ ಬೇರೆಯದಾಗಿದೆ. 24 ಜಿಲ್ಲೆಗಳಿಂದ ಆಯ್ಕೆ ಮಾಡಿರುವ ಫಲಾನುಭವಿಗಳ ಲಿಸ್ಟ್ ಬಂದಿರುತ್ತದೆ. ಇನ್ನು 3 ಜಿಲ್ಲೆಯಿಂದ ಫಲಾನುಭವಿಗಳನ್ನು ಗುರುತಿಸಿ ಕಳುಹಿಸುವ ಪಟ್ಟಿ ಬರಬೇಕು. ನಾವು ಈಗಾಗಲೇ ಬಂದಿರುವ ಜಿಲ್ಲೆಯ ಲಿಸ್ಟ್‌ನ್ನು ಕಳುಹಿಸಿ ಕೇಂದ್ರಸರ್ಕಾರದಿಂದ ಆಹಾರಧಾನ್ಯವನ್ನು ಕಳುಹಿಸಿ ಎಂದು ಕೇಳಿರುತ್ತೇವೆ. ಆಹಾರಧಾನ್ಯಗಳು ಬಂದ ನಂತರ ಎಲ್ಲಾ ಫಲಾನುಭವಿಗಳಿಗೆ ಆಹಾರಧಾನ್ಯವನ್ನು ಕೊಡುತ್ತೇವೆ ಎನ್ನುವ ಬಗ್ಗೆ ತಮ್ಮ ಮುಖೇನ ಹೇಳುತ್ತೇನೆ. ರಾಜ್ಯ ಸರ್ಕಾರದಿಂದ ಬಿಪಿಎಲ್ ಜನರಿರುವ ಸುಮಾರು 15 ಲಕ್ಷ ಕುಟುಂಬಗಳನ್ನು ಐಡೆಂಟಿಫೈ ಮಾಡಿರುವ ಲಿಸ್ಟ್ ಬಂದಿರುತ್ತದೆ. ಇದರಲ್ಲಿ 20 ಕೆಜಿ ಆಹಾರಧಾನ್ಯವನ್ನು ಕೊಡುತ್ತಿದ್ದು 8 ಕೆಜಿ ಅಕ್ಕಿಗೆ 3-50 ಪೈಸೆ ಮತ್ತು ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ಬೆಲೆಯಲ್ಲಿ 8 ಕೆಜಿ ಅಕ್ಕಿಗೆ 6-15 ಪೈಸೆಯಂತೆ ಕೊಡುತ್ತೇವೆ. 2 ಕೆಜಿ ಗೋಧಿಯನ್ನು 2-75 ಪೈಸೆಯಂತೆ, ಮತ್ತು 2 ಕೆಜಿಗೆ 4-65 ಪೈಸೆಯಂತೆ ಕೊಡುತ್ತೇವೆ, ರಾಜ್ಯಸರ್ಕಾರ ಹೆಚ್ಚಿನ ಸಬ್ಸಿಡಿಯನ್ನು ಕೊಡುತ್ತದೆ ಎನ್ನುವ ಮಾತನ್ನು ತಮ್ಮ ಮುಖಾಂತರ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ರಾಜ್ಯಸರ್ಕಾರವು ಒಂದು ಸ್ಕೀಮ್‌ನ್ನು ಹಾಕಿಕೊಂಡಿದ್ದು ಕಳೆದ ವಾರ ಕೇಂದ್ರಸರ್ಕಾರವು ಒಂದು ಘೋಷಣೆಯನ್ನು ಮಾಡಿತು. ಈಗ ಇದ್ದಂತಹ ಪಡಿತರ ಪದ್ಧತಿಯಲ್ಲಿ ಇವತ್ತು ಏನು ರೇಟ್ ಇದೆ, ಅದರಲ್ಲಿ 30 ಪರ್ಸೆಂಟ್ ರಿಡೆಕ್ಷನ್ ಮಾಡಿತು. ಹೆಚ್ಚಿಗೆ ಆಹಾರಧಾನ್ಯ ಸಂಗ್ರಹವಿರುವುದರಿಂದ ಬಿಲೋ ಪಾವರ್ಟಿ ಲೈನ್ ಇದ್ದವರಿಗೆ ಮತ್ತು ಪಡಿತರ ಚೀಟಿ ಇದ್ದವರಿಗೆ, ರೇಷನ್ ಕಾರ್ಡ್ ಇದ್ದವರಿಗೆ ಅವರು ಏನು ಪರ್ಚೆಸ್ ಮಾಡುತ್ತಾರೆ ಅದರಲ್ಲಿ 30 ಪರ್ಸೆಂಟ್ ರಿಡೆಕ್ಷನ್ ಮಾಡುವಂಥದ್ದು ಮಾಡಿದರು. ಹೀಗಾಗಿ ಅಲ್ಲಿ ರಿಡೆಕ್ಷನ್ ಮಾಡಿದ್ದರಿಂದ ನಿಮ್ಮ ಈ ಒಂದು ಸ್ಕೀಮ್‌ನಲ್ಲಿ ರೇಟ್ ಅಥವಾ ಕ್ವಾಂಟಿಟಿಯಲ್ಲಾಗಲಿ ಏನಾದರೂ ಬದಲಾವಣೆಯನ್ನು ತರುವುದಕ್ಕೆ ಸಾಧ್ಯವಿದೆಯೇ? ಮಾನ್ಯ ಸದಸ್ಯರಾದ ಶ್ರೀ ರಾಮದಾಸ್‌ರವರು ಹೇಳಿದಂತೆ ಅಂತ್ಯೋದಯ ಅನ್ನ ಯೋಜನೆ ಕಳೆದ 6 ತಿಂಗಳ ಹಿಂದೆ ಕೇಂದ್ರ ಸರ್ಕಾರದಿಂದ ಜಾರಿಗೆ ಬಂತು, ರಾಜ್ಯ ಸರ್ಕಾರವು ಅದನ್ನು ಗುರುತಿಸುವಲ್ಲೂ ತಡ ಮಾಡಿತು, ಸ್ಕೀಮ್‌ನ್ನು ಇಂಪ್ಲಿಮೆಂಟ್ ಮಾಡುವುದೂ ತಡವಾಯಿತು.

ಶ್ರೀ ಡಿ.ಬಿ.ಇನಾಂದಾರ್: ಮಾನ್ಯ ಅಧ್ಯಕ್ಷರೆ, ಗ್ರಾಮಸಭೆಗಳ ಮುಖಾಂತರ ನಾವು ಈ ವರ್ಗದವರನ್ನು ಗುರುತಿಸಬೇಕಾಗುತ್ತದೆ, ಬಡತನ ರೇಖೆಗಿಂತ ಕಡಿಮೆ ಇರುವ ಜನ ನಮ್ಮಲ್ಲಿ 62 ಲಕ್ಷ ಇದ್ದಾರೆ. ಕೇಂದ್ರ ಸರ್ಕಾರದವರು ನಿಗದಿಪಡಿಸಿದ ಸಂಖ್ಯೆ:31 ಲಕ್ಷ, ಆ 31 ಲಕ್ಷ ಕುಟುಂಬಗಳಲ್ಲಿ 4 ಲಕ್ಷದ 79 ಸಾವಿರ ಕುಟುಂಬಗಳನ್ನು

ಗುರುತಿಸಿದರು. ಇದನ್ನು ಯಾರು ಗುರುತಿಸಬೇಕು? ಗ್ರಾಮಸಭೆಗಳ ಮುಖಾಂತರ ಗುರುತಿಸುವುದು ಒಂದು ಪ್ರಕ್ರಿಯೆಯಾಗಿದೆ. ಮೊನ್ನೆ 30 ಪರ್ಸೆಂಟ್ ಘೋಷಿಸಿದ್ದು ಕೇವಲ ಎಪಿಎಲ್ ಬೆಲೆಗಳಲ್ಲಿ ಮಾತ್ರ ಇಳಿಸಿದ್ದಾರೆ. ಇವತ್ತು ಅವರು ಆ ಬೆಲೆಗಳನ್ನು ಏಕೆ ಇಳಿಸಿದರು, 'ಎಪಿಎಲ್ ಎಂದರೆ ಮೊದಲು ಅಕ್ಕಿಗೆ ರೂಪಾಯಿ 11-30 ಪೈಸೆ ಬೆಲೆಯನ್ನು ನಿಗದಿಪಡಿಸಿದ್ದರು. ಇಂದು ಮಾರ್ಕೆಟ್‌ನಲ್ಲಿ ಅಕ್ಕಿಗೆ ಅದಕ್ಕಿಂತ ಕಡಿಮೆ ದರದಲ್ಲಿ ಸಿಗುತ್ತಿರುವುದರಿಂದ, ಎಲ್ಲಿಯೂ ಯಾವ ರಾಜ್ಯದಲ್ಲಿ ಎಪಿಎಲ್‌ನಲ್ಲಿ ಲಿಫ್ಟ್ ಆಗಲಿಲ್ಲ. ಅಕ್ಕಿ ಕ್ವಿಂಟಾಲ್‌ಗೆ 11ರೂಪಾಯಿ 30 ಪೈಸೆ ಇದ್ದದನ್ನು ಇವತ್ತು 8 ರೂಪಾಯಿ 30 ಪೈಸೆಗೆ ಇಳಿಸಿದರು. ಗೋಧಿಯನ್ನು 9.10 ರೂಪಾಯಿ ಇದ್ದದನ್ನು 6.10 ರೂಪಾಯಿಗೆ ಇಳಿಸಿದರು, ಕೇವಲ ಎಪಿಎಲ್ ಬೆಲೆಯನ್ನು ಮಾತ್ರ ಇಳಿಸಿದ್ದಾರೆ. ಆದರೆ ಬಿಪಿಎಲ್ ಬೆಲೆಯನ್ನು ಇಳಿಸಿಲ್ಲ; ಹಳೆಯ ದರದಲ್ಲಿ ನಾವು ವಿತರಿಸುತ್ತಿದ್ದೇವೆ. ಈ ಬಗ್ಗೆ ನಿನ್ನೆ ಕೇಂದ್ರ ಸರ್ಕಾರದಿಂದ ಆದೇಶ ಬಂದಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕೇಂದ್ರ ಸರ್ಕಾರದ ಈ ಎರಡು ಯೋಜನೆಗಳ ಬಗ್ಗೆ ರಾಜ್ಯ ಸರ್ಕಾರ ನಿರ್ಲಕ್ಷ್ಯ ಮಾಡುತ್ತಿದೆ ಎಂಬ ಭಾವನೆ ಬರುತ್ತಿದೆ, ಅದು ಆಗದಂತೆ ಎಚ್ಚರಿಕೆಯನ್ನು ವಹಿಸಬೇಕಾಗಿದೆ.

ಶ್ರೀ ಡಿ.ಬಿ.ಇನಾಂದಾರ್: ರಾಜ್ಯ ಸರ್ಕಾರ ಇವತ್ತು ಫಲಾನುಭವಿಗಳನ್ನು ಆಯ್ಕೆ ಮಾಡುವಂತಹ ಸಂದರ್ಭದಲ್ಲಿ ಅನೌನ್ಸ್ ಆದ ದಿವಸವನ್ನು ಇವತ್ತು ಇಂಪ್ಲಿಮೆಂಟ್ ಮಾಡುವುದಕ್ಕೆ ಯಾವ ರಾಜ್ಯಕ್ಕೂ ಸಾಧ್ಯವಾಗಲಿಲ್ಲ. ಗ್ರಾಮಸಭೆಗಳ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ವಿಳಂಬವಾಗಿದೆಯೇ ಹೊರತು ರಾಜ್ಯ ಸರ್ಕಾರ ಈ ಕಾರ್ಯಕ್ರಮವನ್ನು ಅಲಕ್ಷ್ಯ ಮಾಡಿದೆ ಎಂಬ ಮಾತನ್ನು ದಯವಿಟ್ಟು ಹೇಳಬಾರದು.

ಬಾಗೇಪಲ್ಲಿ ತಾಲ್ಲೂಕಿನಾದ್ಯಂತ ಬಾಕಿ ಇರುವ ಪಡಿತರ ಚೀಟಿ ವಿತರಣೆ ಬಗ್ಗೆ.

186(2371)

ಶ್ರೀ ಸಂಪಂಗಿ ಎನ್.(ಬಾಗೇಪಲ್ಲಿ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನಾದ್ಯಂತ ಇರುವ ಪಡಿತರದಾರರ ಸಂಖ್ಯೆ ಎಷ್ಟು (ವಿವರ ನೀಡುವುದು)